# ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾದಂ. ನ್ಯಾಯಾಲಯ, ಕುಣಿಗಲ್.

## ಸಿ.ಸಿ. 4501/2023

ಫಿರ್ಯಾದುದಾರರುಃ ಅಮೃತೂರು ಪೊಲೀಸರು

ವಿರುದ್ಧ

ಆರೋಪಿಗಳು : ರಾಮಕೃಷ್ಣ.ಜೆ.ಜಿ ಮತ್ತು ಇತರರು

## ***ದೋಷಾರೋಪಣೆ***

**ಶ್ರೀಮತಿ ಗಂಗವ್ವ. ಆಯಟಿ,** ಬಿ.ಎ.ಎಲ್..ಎಲ್.ಬಿ., (Hon's) ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್ ಆದು ನಾನು, ಆರೋಪಿಗಳಾದ,

| | |
|---|---|
| 1 | ರಾಮಕೃಷ್ಣ.ಜೆ.ಜಿ., ಬಿನ್ ಜೆ.ಸಿ.ಗೂಳಯ್ಯ,<br>ವಯಸ್ಸುಃ 52 ವರ್ಷ,<br>ವಾಸಃ ನಂ.7, 4 ನೇ ಮೇನ್ ರೋಡ್, ಮೌರ್ಯ ಸ್ಕೂಲ್ ಹತ್ತಿರ, ಕಾಮಾಕ್ಷಿಪಾಳ್ಯ, ಬೆಂಗಳೂರು. |
| 2 | ರಾಮಗೂಳಯ್ಯ ಬಿನ್ ಜೆ.ಸಿ.ಗೂಳಯ್ಯ,<br>ವಯಸುಃ 59 ವರ್ಷ,<br>ವಾಸಃ ಜಿನ್ನಾಗರ ಗ್ರಾಮ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು. |
| 3 | ಯತೀಶ್ ಬಿನ್ ರಾಮಗೂಳಯ್ಯ,<br>ವಯಸುಃ 30 ವರ್ಷ,<br>ವಾಸಃ ಜಿನ್ನಾಗರ ಗ್ರಾಮ, ಅಮೃತೂರು ಹೋಬಳಿ, ಕುಣಿಗಲ್ ತಾಲ್ಲೂಕು. |
| 5 | ನೀರಜಮೂರ್ತಿ ಕೋಂ ಮಹೇಶ್.ಟಿ.ಹೆಚ್.,<br>ವಯಸ್ಸುಃ 26 ವರ್ಷ,<br>ವಾಸಃ ಪೀಣ್ಯ 2 ನೇ ಹಂತ, ರಾಜಗೋಪಾಲ ನಗರ, ಬೆಂಗಳೂರು. |

| | |
|---|---|
| 7 | ರಾಧ ಕೋಂ ರಾಮಕೃಷ್ಣ.ಜಿ.ಜಿ.,<br>ವಯಸ್ಸುಃ 49 ವರ್ಷ,<br>ವಾಸಃ ನಂ.7, 4 ನೇ ಮೇನ್ ರೋಡ್, ಮೌರ್ಯ<br>ಸ್ಕೂಲ್ ಹತ್ತಿರ, ಕಾಮಾಕ್ಷಿಪಾಳ್ಯ, ಬೆಂಗಳೂರು. |
| 8 | ನಿಂಗಮ್ಮ, ಕೋಂ ಗೂಳಯ್ಯ,<br>ವಯಸ್ಸುಃ 70 ವರ್ಷ,<br>ವಾಸಃ ನಂ.7, 4 ನೇ ಮೇನ್ ರೋಡ್, ಮೌರ್ಯ<br>ಸ್ಕೂಲ್ ಹತ್ತಿರ, ಕಾಮಾಕ್ಷಿಪಾಳ್ಯ, ಬೆಂಗಳೂರು. |

ನಿಮ್ಮ ಮೇಲೆ ಇಡುವ ಆರೋಪಗಳು ಏನೆಂದರೆ,

ದಿನಾಂಕಃ 03.08.2022 ರಂದು ಸಾಯಂಕಾಲ 16.00 ಗಂಟೆಯಲ್ಲಿ ಅಮೃತೂರು ಪೋಲಿಸ್ ಠಾಣಾ ಸರಹದ್ದು, ಜಿನ್ನಾಗರ ಗಾಮದಲ್ಲಿ ಜಯಮ್ಮ ರವರಿಗೆ ಸೇರಿದ ವಾಸದ ಮನೆಯ ಬಳಿ ಚಾಸಾ-1 ಮತ್ತು 2 ರವರು ಇದ್ದಾಗ ಆರೋಪಿ-1 ರಿಂದ 3, 5, 7 ಮತ್ತು 8 ಆದ ನೀವು ಏಕಾಏಕಿ ಚಾಸಾ-1 ಮತ್ತು ಚಾಸಾ-2 ರವರ ಮನೆಯ ಬಳಿಗೆ ಹೋಗಿ ಓಡಾಡುವ 06 ಅಡಿ ಮಣ್ಣು ರಸ್ತೆಯ ಮೇಲೆ ಗಲೀಜು ನೀರು ಬಿಡುವ ವಿಚಾರವನ್ನು ಚಾಸಾ-1 ಮತ್ತು ಚಾಸಾ-2 ರವರು ಕೇಳಿದ್ದಕ್ಕೆ ಗಲಾಟೆ ಮಾಡಿ ಅವರಿಗೆ ಹೇ ಬೋಳಿಮುಂಡೆ, ಹೇ ಬೋಳಿ ಮಗನೇ ಗಲೀಜು ನೀರನ್ನು 6 ಅಡಿ ಗಲ್ಲಿಗೆ ಬಿಡುತ್ತೇವೆ ಏನು ಕಿತ್ತೋಂತರಾ ಎಂದು ಅವಾಚ್ಯ ಶಬ್ಧಗಳಿಂದ ನಿಂದಿಸಿದ್ದರ ಪ್ರಯುಕ್ತ ನೀವೆಲ್ಲರೂ ಭಾ.ದಂ.ಸಂ. ಕಲಂ 143 ಮತ್ತು 504 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿ-1 ರಿಂದ 3 ಆದ ನೀನು ಚಾಸಾ-1 ಮತ್ತು 2 ರವರನ್ನು ಗಲ್ಲಿ ರಸ್ತೆಯಲ್ಲಿ ಎಳೆದುಕೊಂಡು ಕೈಗಳಿಂದ ಮೈಗೆ ಹೊಡೆದಿದ್ದು, ಆರೋಪಿ-5, 7 ಮತ್ತು 8 ಆದ ನೀವು ಚಾಸಾ-1 ರವರಿಗೆ ಕೆಳಕ್ಕೆ ಕೆಡವಿಕೊಂಡು ಕಾಲುಗಳಿಂದ ಒದ್ದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದರ ಪ್ರಯುಕ್ತ ನೀವೆಲ್ಲರೂ ಭಾ.ದಂ.ಸಂ. ಕಲಂ 323 ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿ-1 ಮತ್ತು 2 ಆದ ನೀನು ಚಾಸಾ-1 ರವರು ಧರಿಸಿದ್ದ ನೈಟಿಯನ್ನು ಹಿಡಿದು ಎಳೆದಾಡಿ ಹರಿದುಹಾಕಿ ಅವರಿಗೆ ಅವಮಾನ ಉಂಟು ಮಾಡಿದ್ದರ ಪ್ರಯುಕ್ತ ನೀವು ಭಾ.ದಂ.ಸಂ. ಕಲಂ 354 ಬಿ ಸಹವಾಚಕ 149 ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 14 ನೇ ಆಗಸ್ಟ್ -2024

ಸಹಿ/-
ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.

ಪ್ರಶ್ನೆ ಃ 1 ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 5 :

ಆರೋಪಿ 7 :

ಆರೋಪಿ 8 :

ಪ್ರಶ್ನೆ ಃ 2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ ಆರೋಪಿ 1 :

ಆರೋಪಿ 2 :

ಆರೋಪಿ 3 :

ಆರೋಪಿ 5:

ಆರೋಪಿ 7:

ಆರೋಪಿ 8:

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 14 ನೇ ಆಗಸ್ಟ್ -2024

ಸಹಿ/-

ಹೆಚ್ಚುವರಿ ಹಿರಿಯ ಸಿವಿಲ್
ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಕುಣಿಗಲ್.